

## ಆದರ್ಶ ಮೆರೆದ ಜಪಾನಿ ಅಭಿಮಾನಿಗಳು

ಕೊಲಂಬಿಯಾ ಎದುರಿನ ಪಂದ್ಯದ ನಂತರ ಜಪಾನ್ ಅಭಿಮಾನಿಗಳು ತಮ್ಮ ಗ್ಯಾಲರಿಯಲ್ಲಿ ಬಿದ್ದಿದ್ದ ಕಸವನ್ನು ಎತ್ತಿ ಸ್ಥಳವನ್ನು ಸ್ವಚ್ಛಗೊಳಿಸಿದರು. ಫುಟ್‌ಬಾಲ್‌ನಲ್ಲಿ ಬಹುತೇಕ ಅಭಿಮಾನಿಗಳು ಹೊಡೆದಾಟ, ರಂಪಾಟಗಳಿಂದಲೇ ಸುದ್ದಿ ಮಾಡುತ್ತಾರೆ. ಅಂತಹದರಲ್ಲಿ ಜಪಾನಿ ಅಭಿಮಾನಿಗಳು ಸ್ವಚ್ಛತೆಯ ಮೂಲಕ ವಿಭಿನ್ನವಾಗಿ ಗಮನ ಸೆಳೆದರು.



ರಷ್ಯಾದಲ್ಲಿ ನಡೆಯುತ್ತಿರುವ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಜಪಾನ್ ತಂಡವು ಕೊಲಂಬಿಯಾ ಎದುರು ಜಯಿಸಿತು. ಜಪಾನ್‌ನಲ್ಲಿ ವಿಜಯೋತ್ಸವ ರಂಗೇರಿತ್ತು. ಅಮೆರಿಕ ಭಾಗದ ದೇಶವೊಂದರ ಮೇಲೆ ಯಾವುದೇ ಕ್ರೀಡೆ ಅಥವಾ ಯುದ್ಧದಲ್ಲಿ ಸಿಗುವ ಜಯ ತನ್ನ ಪಾಲಿಗೆ ಅಮೂಲ್ಯ ಎಂಬ ಸಂದೇಶ ಅದರಲ್ಲಿ ಪರೋಕ್ಷವಾಗಿತ್ತು.

2020ರಲ್ಲಿ ಒಲಿಂಪಿಕ್ಸ್ ಆಯೋಜನೆಗೆ ಸಿದ್ಧವಾಗಿರುವ ಜಪಾನ್ ಈ ಹಂತದಲ್ಲಿ ಮಾಡಿರುವ ಸಾಧನೆ ಅತ್ಯಂತ ಮಹತ್ವದ್ದು. ಅಷ್ಟೇ ಅಲ್ಲ, ವಿಶ್ವಕಪ್‌ನಲ್ಲಿ ದಕ್ಷಿಣ ಅಮೆರಿಕದ ತಂಡವೊಂದರ ಎದುರು ಗೆದ್ದ ಏಷ್ಯಾದ ಮೊದಲ ತಂಡ ಎಂಬ ಹೆಮ್ಮೆಯೂ ಜಪಾನ್ ಪಾಲಾಗಿದೆ.

2014ರಲ್ಲಿ ಬ್ರೆಜಿಲ್‌ನಲ್ಲಿ ನಡೆದಿದ್ದ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಕೊಲಂಬಿಯಾ 4–1 ಗೋಲುಗಳಿಂದ ಜಪಾನ್ ಎದುರು ಗೆದ್ದಿತ್ತು. ಆ ಸೋಲಿಗೆ ಸೇಡು ತೀರಿಸಿಕೊಂಡ ಜಪಾನ್ ಬೀಗಿತು. 2–1 ಗೋಲುಗಳ ಆ ಜಯ ಸಣ್ಣದಲ್ಲ. ಆರನೇ ನಿಮಿಷದಲ್ಲಿ ಸಿಕ್ಕಿದ್ದ ಪೆನಾಲ್ಟಿ ಅವಕಾಶದಲ್ಲಿ ಗೋಲು ಬಾರಿಸಿದ್ದ ಮಿಡ್‌ಫೀಲ್ಡರ್ ಶಿಂಜಿ ಕಗಾವಾ ಅವರ ಕಂಗಳಲ್ಲಿ ಹೆಮ್ಮೆಯ ಹನಿ ಜಿನುಗಿತ್ತು. ಗ್ಯಾಲರಿಯಲ್ಲಿದ್ದ ಜಪಾನಿಯರ ಪುಟ್ಟ ಕಂಗಳಲ್ಲಿ ಸಂತಸದ ಕಡಲು ಧುಮ್ಮಿಕ್ಕಿತ್ತು. ಕೊಲಂಬಿಯಾವೂ ಒಂದು ಗೋಲು ಹೊಡೆದಾಗ ಸ್ವಲ್ಪ ಮಟ್ಟಿನ ಆತಂಕ ಎದುರಾಗಿತ್ತು. ಆದರೆ, ಕೋಚ್ ಅಕಿರಾ ನಿಶಿನೊ ಅವರ ತಂತ್ರಗಳು ಫಲಿಸಿದವು. 73ನೇ ನಿಮಿಷದಲ್ಲಿ ಗೋಲು ಗಳಿಸಿದ ಯುಯಾ ಒಸಾಕ ಜಪಾನಿಗಳ ಕಣ್ಮಣಿಯಾಗಿಬಿಟ್ಟರು. ಈಗವರು ಆ ದೇಶದ ಪೋಸ್ಟರ್ ಬಾಯ್!

### ಬೆಳೆದು ಬಂದ ಹಾದಿ

ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಜಪಾನ್, ಕ್ರೀಡೆಯಲ್ಲೂ ಹಿಂದೆ ಬಿದ್ದಿಲ್ಲ. ಏಷ್ಯನ್ ಗೇಮ್ಸ್‌ನಲ್ಲಿ ಚೀನಾಗೆ ಸವಾಲೊಡ್ಡುವ ದೇಶವಿದು. ಜುಡೊ, ಈಜು, ಕರಾಟೆ, ಟೇಕ್ವಾಂಡೋ, ಅಥ್ಲೆಟಿಕ್ಸ್‌ಗಳಲ್ಲಿ ಉತ್ತಮವಾಗಿದೆ. ಫುಟ್‌ಬಾಲ್ ಮತ್ತು ಟೆನಿಸ್‌ನಲ್ಲೂ ಪ್ರವರ್ಧಮಾನಕ್ಕೆ ಬರುತ್ತಿದೆ.

1917ರಲ್ಲಿ ಮೊದಲ ಬಾರಿಗೆ ಜಪಾನ್ ತಂಡವು ಅಂತರರಾಷ್ಟ್ರೀಯ ಫುಟ್‌ಬಾಲ್ ಪಂದ್ಯವನ್ನು ಆಡಿತ್ತು. ಅದರಲ್ಲಿ 0–5 ಗೋಲುಗಳಿಂದ ಚೀನಾ ಎದುರು ಸೋತಿತ್ತು. 1998ರಲ್ಲಿ ಮೊದಲ ಬಾರಿಗೆ ಫಿಫಾ ವಿಶ್ವಕಪ್ ಟೂರ್ನಿಗೆ ಅರ್ಹತೆ ಗಿಟ್ಟಿಸಿತ್ತು. ಆರು ಸಲ ವಿಶ್ವಕಪ್‌ನಲ್ಲಿ ಆಡಿದೆ. 2002 ಮತ್ತು 2010ರಲ್ಲಿ ಪ್ರೀ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ್ದು ಶ್ರೇಷ್ಠ ಸಾಧನೆ.

ಏಷ್ಯನ್ ಫುಟ್‌ಬಾಲ್ ಟೂರ್ನಿಲ್ಲಿ ನಾಲ್ಕು ಬಾರಿ ಚಾಂಪಿಯನ್! 1999ರಲ್ಲಿ ಕೊಪಾ ಅಮೆರಿಕ ಟೂರ್ನಿಗೂ ಅರ್ಹತೆ ಗಿಟ್ಟಿಸಿತ್ತು. ಫಿಫಾ ರ‍್ಯಾಂಕಿಂಗ್‌ನಲ್ಲಿ 61ನೇ ಸ್ಥಾನದಲ್ಲಿದೆ. 1968ರ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿತ್ತು.

### ಕೋಚ್ ನೇಮಕ ಪ್ರಹಸನ

ವಿಶ್ವಕಪ್ ಟೂರ್ನಿಗೆ ಜಪಾನ್ ತಂಡ ಅರ್ಹತೆ ಪಡೆದ ಸಂದರ್ಭ ಹಳೆಯ ಕೋಚ್ ಅವರನ್ನು ತೆಗೆದು ಹಾಕಲಾಯಿತು. ಟೂರ್ನಿಗೆ ಹತ್ತು ವಾರಗಳ ಮುನ್ನವಷ್ಟೇ ಅಕಿರಾ ನಿಶಾನೊ ಅವರನ್ನು ನೇಮಕ ಮಾಡಲಾಯಿತು. ತಾಂತ್ರಿಕ ನಿರ್ದೇಶಕರಾಗಿದ್ದ ಅವರು ಹಿರಿಯ ಫುಟ್‌ಬಾಲ್ ಆಟಗಾರನೂ ಹೌದು.

ಅಧಿಕಾರ ಸ್ವೀಕರಿಸಿದ ನಂತರ ಅಕಿರಾ, ರಕ್ಷಣಾತ್ಮಕ ಆಟಕ್ಕಿಂತ ಆಕ್ರಮಣಕಾರಿ ಆಟಕ್ಕೆ ಹೆಚ್ಚು ಒತ್ತು ನೀಡಿದರು. ಅದರ ಫಲ ಈಗ ಸಿಗುತ್ತಿದೆ.

'ಆಕ್ರಮಣವೇ ಶ್ರೇಷ್ಠ ರಕ್ಷಣಾತ್ಮಕ ಕಲೆಯೂ ಹೌದು. ಎದುರಾಳಿ ತಂಡವನ್ನು ಆಕ್ರಮಣಕಾರಿ ಆಟದ ಮೂಲಕ ಒತ್ತಡಕ್ಕೆ ತಳ್ಳಬಹುದು. ಅವರ ಮೇಲೆ ಒತ್ತಡ ಹೇರಿದಷ್ಟೂ ಪಂದ್ಯ ನಮ್ಮತ್ತ ವಾಲುತ್ತದೆ' ಎನ್ನುತ್ತಾರೆ ಅಕಿರಾ.

ಯುವ ಮತ್ತು ಅನುಭವಿ ಆಟಗಾರರನ್ನು ಅಗತ್ಯಕ್ಕೆ ತಕ್ಕಂತೆ ಕಣಕ್ಕಿಳಿಸುವ ತಂತ್ರಗಾರಿಕೆಯನ್ನು ಅಕಿರಾ ಅಚ್ಚುಕಟ್ಟಾಗಿ ನಿರ್ವಹಿಸಿದ್ದು ಕೂಡ ಉತ್ತಮ ಫಲ ನೀಡಿದೆ.

ಎಚ್ ಗುಂಪಿನಲ್ಲಿ ಆಡುತ್ತಿರುವ ಜಪಾನ್ ತಂಡವು ಇನ್ನೊಂದು ಪಂದ್ಯದಲ್ಲಿ ಗೆದ್ದರೆ 16ರ ಘಟ್ಟ ತಲುಪುತ್ತದೆ. ಬಲಿಷ್ಠ ಸೆನೆಗಲ್ ಮತ್ತು ಪೋಲೆಂಡ್ ತಂಡಗಳನ್ನು ಎದುರಿಸಬೇಕಿದೆ. ಆತ್ಮವಿಶ್ವಾಸದ ತುತ್ತತುದಿಯಲ್ಲಿರುವ ಜಪಾನಿ ಆಟಗಾರರು ಮತ್ತೊಂದು ಇತಿಹಾಸ ಬರೆಯಲು ಸಜ್ಜಾಗಿದ್ದಾರೆ. ಏಷ್ಯಾ ಪ್ರತಿನಿಧಿಸುತ್ತಿರುವ ಇರಾನ್, ದಕ್ಷಿಣ ಕೊರಿಯಾ ತಂಡಗಳಿಗಿಂತಲೂ ಜಪಾನ್ ಮೇಲೆ ಈಗ ಎಲ್ಲರ ವಿಶ್ವಾಸ ಹೆಚ್ಚಿದೆ.

ವಿನ್ಯಾಸ: ದಿಲ್